# ಕರ್ನಾಟಕ ಲೋಕಾಯುಕ್ತ

ಕಂಪ್ಲೆಂಟ್/ಉಪಲೋಕ್/ಜಿಎಲ್‌ಬಿ/1080/2021
ಪಿ.ಓ.ಎ.ಆರ್.ಇ–06(ಮಂಡನಾಧಿಕಾರಿಯವರ ಶಾಖೆ).

ಬಹುಮಹಡಿಗಳ ಕಟ್ಟಡ,
ಡಾ: ಬಿ.ಆರ್. ಅಂಬೇಡ್ಕರ್ ವೀದಿ,
ಬೆಂಗಳೂರು ದಿನಾಂಕ : 13/12/2021

## ಕರ್ನಾಟಕ ಲೋಕಾಯುಕ್ತ ಕಾಯಿದೆ 1984 ರ ಕಲಂ 12(3) ರ ಅನ್ವಯ ಶಿಫಾರಸ್ಸು ವರದಿ

ವಿಷಯ: 1) ಶ್ರೀ ವಸಂತ ಆರ್ ಗೌಡ್ ಬಿನ್ ರಾಮಗೌಡ ತಹಶೀಲ್ದಾರರು ಕುರುಗೋಡು (ಹಾಲಿ ತಹಶೀಲ್ದಾರರು ಹೊನ್ನಾವರ) ತಹಶೀಲ್ದಾರ ಕಛೇರಿ ಹೊನ್ನಾವರ, ಹೊನ್ನಾವರ ತಾಲ್ಲೂಕು ಉತ್ತರಕನ್ನಡ ಜಿಲ್ಲೆ

2) ಶ್ರೀ ಮಲ್ಲಪ್ಪ ಗುಡಿಹಿಂದಲ @ ಜಿ ಹೆಚ್ ಮಲ್ಲೇಶ ಬಿನ್ ಹೇಮಪ್ಪ ಗ್ರಾಮ ಲೆಕ್ಕಾಧಿಕಾರಿಗಳು ಕುಡತಿನಿ, ಬಳ್ಳಾರಿ ಜಿಲ್ಲೆರವರುಗಳು ದುರ್ನಡತೆ / ದುರ್ವರ್ತನೆ ತೋರಿದ ಬಗ್ಗೆ.

***

1) ಬಳ್ಳಾರಿ ಭ್ರಷ್ಟಾಚಾರ ನಿಗ್ರಹ ದಳ ಪೋಲಿಸ್ ಠಾಣೆಯ ಪೋಲಿಸ್ ನಿರೀಕ್ಷಕರು, (ಇನ್ನು ಮುಂದೆ 'ತನಿಖಾಧಿಕಾರಿ' ಎಂದು ಕರೆಯಲ್ಪಡುತ್ತಾರೆ) ತನಿಖಾ ವರದಿ ಮತ್ತು ಸಂಭಂದಿಸಿದ ದಾಖಲೆಗಳೊಂದಿಗೆ ಸಲ್ಲಿಸಿದ ವರದಿಯಲ್ಲಿ 1) ಶ್ರೀ ವಸಂತ ಆರ್ ಗೌಡ್ ಬಿನ್ ರಾಮಗೌಡ ತಹಶೀಲ್ದಾರರು ಕುರುಗೋಡು (ಹಾಲಿ ತಹಶೀಲ್ದಾರರು ಹೊನ್ನಾವರ) ತಹಶೀಲ್ದಾರ ಕಛೇರಿ ಹೊನ್ನಾವರ, ಹೊನ್ನಾವರ ತಾಲ್ಲೂಕು ಉತ್ತರಕನ್ನಡ ಜಿಲ್ಲೆ 2) ಮಲ್ಲಪ್ಪ ಗುಡಿಹಿಂದಲ @ ಜಿ ಹೆಚ್ ಮಲ್ಲೇಶ ಬಿನ್ ಹೇಮಪ್ಪ ಗ್ರಾಮ ಲೆಕ್ಕಾಧಿಕಾರಿಗಳು ಕುಡತಿನಿ, ಬಳ್ಳಾರಿ ಜಿಲ್ಲೆ (ಇನ್ನು ಮುಂದೆ ಕ್ರಮವಾಗಿ 1ನೇ ಮತ್ತು 2ನೇ 'ಎದುರುದಾರರು' ಎಂದು ಕರೆಯಲ್ಪಡುತ್ತಾರೆ). ಶ್ರೀ ಆರ್. ಅಬ್ದುಲ್ ರಫೀಕ್ ಬಿನ್ ಆರ್. ಇಬ್ರಾಹಿಂ ಸಾಹಿಬ್ ವ್ಯವಸಾಯ, ವಾಸ: ಮನೆ ನಂ; ಎಲ್‌ಐಜಿ–10 ಕೆ ಎಚ್ ಬಿ ಕಾಲೋನಿ ತಿಲಕ್ ನಗರ, ಕಂಟೋನ್‌ಮೆಂಟ್ ಬಳ್ಳಾರಿ ಜಿಲ್ಲೆ, ( ಇನ್ನು ಮುಂದೆ 'ದೂರುದಾರರು' ಎಂದು ಕರೆಯಲ್ಪಡುತ್ತಾರೆ) ಇವರು 1 ಮತ್ತು 2ನೇ ಎದುರುದಾರರನ್ನು ಅವರ ಕೆಲಸದ ಬಗ್ಗೆ ಭೇಟಿ ಮಾಡಿದಾಗ ಎದುರುದಾರರು ಲಂಚದ ಹಣಕ್ಕೆ ಬೇಡಿಕೆಯಿಟ್ಟು ಅದನ್ನು ಪಡೆದು ದುರ್ನಡತೆ ತೋರಿಸಿರುವುದು ಕಂಡುಬಂದಿದ್ದರಿಂದ, ಕರ್ನಾಟಕ ಲೋಕಾಯುಕ್ತ ಕಾಯ್ದೆ 1984 ರ ಕಲಂ 7(2) ರಡಿಯಲ್ಲಿ ತನಿಖೆ ಕೈಗೊಂಡಿದೆ.

2) **ಪ್ರಕರಣದ ಸಂಕ್ಷಿಪ್ತ ಸಾರಾಂಶ:-**

i) ದೂರುದಾರರಾದ ಆರ್ ಅಬ್ದುಲ್ ರಫೀಕ್‌ರವರು ವ್ಯವಸಾಯಗಾರರಾಗಿದ್ದು, ದಿ: 15/05/2017 ರಂದು ಬಳ್ಳಾರಿ ನಗರದ ವಾಸಿಯಾದ ಶ್ರೀಮತಿ ಬನ್ನೇಮ್ಮ ಕೋಂ ದಿವಗಂತ ಚಿದಾನಂದಪ್ಪ ಇವರ ಕಡೆಯಿಂದ ಕುಡತಿನಿ ಗ್ರಾಮದ ಸರ್ವೆನಂ: 337/4 ರ ಪೈಕಿ 62 ಸೆಂಟ್ಸ್ ಜಮೀನನ್ನು, ಶ್ರೀಮತಿ ಬನ್ನೇಮ್ಮ ರವರ ಮಗನಾದ ಕೆ. ಕಾಳಪ್ಪ ಬಿನ್ ದಿವಂಗತ ಚಿದಾನಂದಪ್ಪರವರ ಕಡೆಯಿಂದ ಕುಡತಿನಿ ಸರ್ವೆ ನಂ. 333/3 ಪೈಕಿ 1 ಎಕರೆ ಜಮೀನನ್ನು ಮತ್ತು ಶ್ರೀಮತಿ ಬನ್ನೇಮ್ಮ ರವರ ಇನ್ನೊಬ್ಬ ಮಗನಾದ ಕೆ. ವಿರೇಶ ಬಿನ್ ದಿವಂಗತ ಚಿದಾನಂದಪ್ಪ ಇವರ ಕಡೆಯಿಂದ ಕುಡತಿನಿ ಗ್ರಾಮದ ಸರ್ವೆ ನಂ. 337/5 ಪೈಕಿ 1 ಎಕರೆ ಜಮೀನಿನನ್ನು ಖರೀದಿ ಮಾಡಿ ಬಳ್ಳಾರಿ ಉಪನೊಂದಣಾಧಿಕಾರಿಗಳ ಕಛೇರಿಯಲ್ಲಿ ಕ್ರಮವಾಗಿ ದೂರುದಾರರು ನೊಂದಣಿ ಮಾಡಿಸಿಕೊಂಡಿರುತ್ತಾರೆ. ದೂರುದಾರರು ನೊಂದಣಿ ಮಾಡಿಸಿಕೊಂಡ ತರುವಾಯ ಖಾತೆ ಪಹಣಿ ತಮ್ಮ ಹೆಸರಿಗೆ ಮಾಡಿಕೊಳ್ಳಲು ಕುರುಗೋಡು ತಾಲ್ಲೂಕ ಕಛೇರಿಯ ಭೂಮಿ ಕೇಂದ್ರಕ್ಕೆ ಹೋಗಿ ಅರ್ಜಿ ಸಲ್ಲಿಸಿರುತ್ತಾರೆ. ದೂರುದಾರರಿಗೆ ಮಾರಾಟ ಮಾಡಿದ ಶ್ರೀಮತಿ ಬನ್ನೇಮ್ಮರವರ ಕುಂಟುಬದವರಿಗೆ ಬೇರೆ ಹಣವನ್ನು ಕೊಡುವುದು ಇದ್ದು, ತಡವಾಗಿದ್ದರಿಂದ ಅವರು ತಕರಾರು ಸಲ್ಲಿಸಿರುತ್ತಾರೆ. ಆ ಬಗ್ಗೆ ತಹಶೀಲ್ದಾರರ ನ್ಯಾಯಾಲಯದಲ್ಲಿ ವಿಚಾರಣೆ ನಡೆಯುತ್ತಿದ್ದು, ನಂತರ ಅವರಿಗೆ ಹಣ ಸಂದಾಯವಾದ ಮೇಲೆ ಶ್ರೀಮತಿ ಬನ್ನೇಮ್ಮ ಮತ್ತು ಅವರ ಮಕ್ಕಳು ಖಾತೆ ಪಹಣಿ ಬದಲಾವಣೆ ಮಾಡಲು ತಮ್ಮ ಯಾವುದೇ ತಕರಾರು ಇರುವುದಿಲ್ಲವೆಂದು ಪ್ರಮಾಣ ಪತ್ರವನ್ನು ತಹಶೀಲ್ದಾರವರ ನ್ಯಾಯಾಲಯಕ್ಕೆ ನೀಡಿರುತ್ತಾರೆ. ದಿ: 14/06/2018 ರ ಹಿಂದಿನ 15 ದಿನಗಳ ಹಿಂದೆ ದೂರುದಾರರು 1ನೇ ಎದುರುದಾರರನ್ನು ಭೇಟಿ ಮಾಡಿ ಖಾತೆ ಪಹಣಿ ಬಗ್ಗೆ ವಿಚಾರಿಸಿದಾಗ ಶ್ರೀಮತಿ ಬನ್ನೇಮ್ಮ ಮತ್ತು ಅವರ ಮಕ್ಕಳನ್ನು ಕರೆದುಕೊಂಡು ಬರುವಂತೆ ತಿಳಿಸಿದ್ದು, ಆಗ ದೂರುದಾರರು ಈಗಾಗಲೇ ಅವರು ತಕರಾರು ಇಲ್ಲವೆಂಬ ಬಗ್ಗೆ ಪ್ರಮಾಣ ಪತ್ರವನ್ನು ನೀಡಿದ್ದಾರೆ ಎಂದು ತಿಳಿಸಿದಾಗ 1ನೇ ಎದುರುದಾರರು ಶ್ರೀಮತಿ ಬನ್ನೇಮ್ಮ ಮತ್ತು ಅವರ ಮಕ್ಕಳಿಗೆ ನೋಟಿಸ್ ನೀಡುತ್ತೇವೆ ಮತ್ತು ಕುಡುತಿನಿ ಗ್ರಾಮ ಲೆಕ್ಕಾಧಿಕಾರಿಗಳಾದ ಎರಡನೇ ಎದುರುದಾರರಿಂದ ವರದಿ ಬಂದ ನಂತರ ಕೆಲಸ ಆಗುತ್ತದೆಂದು ಹೇಳಿ ಕಳುಹಿಸಿರುತ್ತಾರೆ. ಆದಾದ ಒಂದು ವಾರದ ನಂತರ ಪುನಃ ದೂರುದಾರರು ಒಂದನೇ ಎದುರುದಾರನ್ನು ಭೇಟಿ ಮಾಡಿದಾಗ ಅವರು ಅವರಿಗೆ ತಮ್ಮ ಕಛೇರಿಯಿಂದ ಶ್ರೀಮತಿ ಬನ್ನೆಮ್ಮ ಮತ್ತು ಅವರ ಮಕ್ಕಳಿಗೆ ಕೊಡುವ ನೋಟಿಸನ್ನು ತೆಗೆದುಕೊಂಡು ಹೋಗಿ ಅದನ್ನು ಎರಡನೇ ಎದುರುದಾರರಿಗೆ ನೀಡಿ ಅವರು ಸದರಿ ನೋಟಿಸುಗಳನ್ನು ಜಾರಿ ಮಾಡಿದ ತರುವಾಯ ತೆಗೆದುಕೊಂಡು ಬನ್ನಿ, ಅವರು ಇರದಿದ್ದರೆ 2ನೇ ಎದುರುದಾರರು ವರದಿ ಕೊಡುತ್ತಾರೆ, ಅದನ್ನು ತೆಗೆದುಕೊಂಡು ಬನ್ನಿ ಎಂದು ತಿಳಿಸಿರುತ್ತಾರೆ. ದೂರುದಾರರು ಸದರಿ ನೋಟಿಸುಗಳನ್ನು

ತೆಗೆದುಕೊಂಡು 2ನೇ ಎದುರುದಾರರನ್ನು ಭೇಟಿ ಮಾಡಿದಾಗ ಅವರು ಒಂದು ಕೆಲಸಕ್ಕೆ ರೂ. 10,000/- ಗಳಂತೆ ರೂ. 30,000/- ಗಳ ಲಂಚದ ಹಣವನ್ನು ನೀಡಿದರೆ ಕೆಲಸ ಆಗುತ್ತದೆ ಎಂದು ಲಂಚದ ಹಣಕ್ಕೆ ಬೇಡಿಕೆಯಿಟ್ಟಿರುತ್ತಾರೆ.

ದಿ: 14/06/2018 ರಂದು ಬೆಳಿಗ್ಗೆ 8.21 ಕ್ಕೆ ದೂರುದಾರರು ಅವರ ಮೊಬೈಲ್ ನಂ. 8310409231 ರಿಂದ 2ನೇ ಎದುರುದಾರರ ಮೊಬೈಲ್ ನಂ. 7026467436ಕ್ಕೆ ಮಾತನಾಡಿದ್ದು, ರಂಜಾನ್ ಹಬ್ಬ ಇದ್ದು, ಖರ್ಚುಗಳು ಇದ್ದುದರಿಂದ ಬೇಡಿಕೆಯಿಟ್ಟ ರೂ. 30,000/- ಕ್ಕಿಂತ ಕಡಿಮೆ ಮಾಡಿಕೊಳ್ಳುವಂತೆ ದೂರುದಾರರು ಕೇಳಿದಾಗ 2ನೇ ಎದುರುದಾರರು, 1ನೇ ಎದುರುದಾರರು ಇನ್ನು ಹೆಚ್ಚಿಗೆ ಹಣ ಕೇಳಿದ್ದು, ಆದರೆ 2ನೇ ಎದುರುದಾರರು ರೂ. 30,000/- ಹಣಕ್ಕೆ ಮಾಡಿಕೊಡಿ ಎಂದು 1ನೇ ಎದುರುದಾರರಿಗೆ ಒಪ್ಪಿಸಿದ್ದಾಗಿ ತಿಳಿಸಿರುತ್ತಾರೆ ಮತ್ತು 1ನೇ ಎದುರುದಾರರು ವರ್ಗಾವಣೆ ಆಗಿ ಹೋಗುವವರಿದ್ದಾರೆ ಇನ್ನೊಬ್ಬರು ಬಂದರೆ ಕಷ್ಟ ಆಗುತ್ತದೆ, ಆದ್ದರಿಂದ ಆ ಹಣವನ್ನು ಕೊಟ್ಟು ದೂರುದಾರರಿಗೆ ಕೆಲಸವನ್ನು ಮಾಡಿಸಿಕೊಳ್ಳಿ ಎಂದು ತಿಳಿಸಿರುತ್ತಾರೆ. ಅದೇ ದಿನ ಮಧ್ಯಾಹ್ನ ಸಮಯ 2:11 ಗಂಟೆಗೆ 2ನೇ ಎದುರುದಾರರು ದೂರುದಾರರ ಮೊಬೈಲ್‌ಗೆ ಕರೆ ಮಾಡಿ ಕೆಲಸ ಮಾಡಿಕೊಡುವ ಸಂಬಂಧ ಮಾತನಾಡಿ 1ನೇ ಎದುರುದಾರರು ರಿಲೀವ್ ಆಗ್ತಾರೆ ಕೂಡಲೇ ರೂ. 30,000/- ಹಣ ತೆಗೆದುಕೊಂಡು ಕುಡತಿನಿಗೆ ಬನ್ನಿ ಎಂದು ತಿಳಿಸಿದಾಗ ದೂರುದಾರರು ಹಣ ಇನ್ನು ಹೊಂದಾಣಿಕೆ ಆಗಿಲ್ಲ ಎಂದಾಗ 2ನೇ ಎದುರುದಾರರು ದೂರುದಾರರಿಗೆ ಈಗ ರೂ.20,000/- ತೆಗೆದುಕೊಂಡು ಬಂದು 1ನೇ ಎದುರುದಾರರಿಗೆ ಬೇಟಿಯಾಗಿ ಹಣ ಕಡಿಮೆ ಮಾಡಿಕೊಳ್ಳಿ ಎಂದು ಕೇಳಿಕೊಳ್ಳಿ ಆಗ ಕಡಿಮೆ ಮಾಡಬಹುದು ಎಂದು ಮಾತನಾಡಿದ್ದನ್ನು ದೂರುದಾರರು ಅವರ ಮೊಬೈಲ್‌ನಲ್ಲಿ ಧ್ವನಿಮುದ್ರಿಸಿಕೊಂಡಿದ್ದು, ದೂರುದಾರರಿಗೆ ಲಂಚದ ಹಣ ನೀಡಲು ಇಷ್ಟವಿಲ್ಲದ್ದರಿಂದ ದಿ: 14/06/2021 ರಂದು ಬಳ್ಳಾರಿ ಎಸಿಬಿ ಪೋಲಿಸ್ ಠಾಣೆಗೆ ಹಾಜರಾಗಿ ದೂರನ್ನು ಸಲ್ಲಿಸಿರುತ್ತಾರೆ. ಈ ಬಗ್ಗೆ ಬಳ್ಳಾರಿ ಎಸಿಬಿ ಠಾಣೆಯ ಅಧಿಕಾರಿಗಳು ದೂರನ್ನು ಪಡೆದು ತಮ್ಮ ಠಾಣೆಯ ಗುನ್ನೆ ನಂ.05/2018 ರಲ್ಲಿ ಕಲಂ 7, 13(1)(ಡಿ) ಸಹಿತ 13(2) ಭ್ರಷ್ಟಾಚಾರ ನಿಷೇಧ ಕಾಯ್ದೆ 1998 ರಡಿಯಲ್ಲಿ ಪ್ರಕರಣ ದಾಖಲಿಸಿಕೊಂಡು ಪ್ರಥಮ ವರ್ತಮಾನ ವರದಿಯನ್ನು ಸಲ್ಲಿಸಿರುತ್ತಾರೆ.

ii) ದಿ: 14/06/2018 ರಂದು ತನಿಖಾಧಿಕಾರಿಯವರು ಜಪ್ತಿಪೂರ್ವ ಪಂಚನಾಮೆಯ ಸಮಯದಲ್ಲಿ ಇಬ್ಬರು ಪಂಚರನ್ನು ಠಾಣೆಗೆ ಕರೆಸಿ, ಅವರಿಗೆ ದೂರುದಾರರನ್ನು ಪರಿಚಯಿಸಿ, ದೂರಿನ ಅಂಶಗಳನ್ನು ತಿಳಿಸಿದ ನಂತರ, ಅವರು ಪಂಚರಾಗಿ ಸಹಕರಿಸಲು ಒಪ್ಪಿಕೊಂಡಿರುತ್ತಾರೆ. ನಂತರ ತನಿಖಾಧಿಕಾರಿಯವರು ದೂರುದಾರರಿಗೆ ಕೊಡಲು ತಂದಿರುವ ಹಣವನ್ನು ಹಾಜರುಪಡಿಸಲು ತಿಳಿಸಿದಾಗ, ದೂರುದಾರರು 2,000/- ರೂ. ಮುಖಬೆಲೆಯ 10 ನೋಟುಗಳನ್ನು ಹಾಜರುಪಡಿಸಿದ್ದು, ತನಿಖಾಧಿಕಾರಿಯವರ ಸೂಚನೆ

ಮೇರೆಗೆ ಪಂಚಸಾಕ್ಷಿ-1 ರವರು ನೋಟುಗಳ ವಿವರಗಳನ್ನು ಪಂಚಸಾಕ್ಷಿ-2ರವರಿಗೆ ಹೇಳಿದಾಗ ಹಾಳೆಯಲ್ಲಿ ಬರೆದುಕೊಂಡಿರುತ್ತಾರೆ ಮತ್ತು ತನಿಖಾಧಿಕಾರಿ ಪಂಚನಾಮೆಯಲ್ಲೂ ಕೂಡ ನಮೂದಿಸಿಕೊಂಡಿರುತ್ತಾರೆ. ತನಿಖಾಧಿಕಾರಿಯವರು ಸಿಬ್ಬಂದಿಯ ಮುಖಾಂತರ ಸದರಿ ನೋಟುಗಳಿಗೆ ಫಿನಾಪ್ತಲಿನ್ ಪುಡಿಯನ್ನು ಲೇಪಿಸಿದ ನಂತರ, ಪಂಚಸಾಕ್ಷಿ-1ರವರ ಮುಖಾಂತರ ತನಿಖಾಧಿಕಾರಿಯು ದೂರುದಾರರ ಶರ್ಟಿನ ಎಡಭಾಗದ ಜೇಬಿನಲ್ಲಿ ಪುಡಿಲೇಪಿತ ಲಂಚದ ಹಣವನ್ನು ಇಡಿಸಿರುತ್ತಾರೆ. ದೂರುದಾರರು 2ನೇ ಎದುರುದಾರರು ಲಂಚದ ಹಣಕ್ಕೆ ಬೇಡಿಕೆ ಇಟ್ಟ ಸಂಭಾಷಣೆಯನ್ನು ಧ್ವನಿಮುದ್ರಿಸಿಕೊಂಡಿದ್ದ ಮೊಬೈಲ್‌ನ್ನು ತನಿಖಾಧಿಕಾರಿಯವರ ಮುಂದೆ ಹಾಜರುಪಡಿಸಿರುತ್ತಾರೆ. ತನಿಖಾಧಿಕಾರಿಯವರು ಆ ಮೊಬೈಲ್‌ನಲ್ಲಿರುವ ಸಂಭಾಷಣೆಯನ್ನು ಎಲ್ಲರಿಗೂ ಕೇಳಿಸಿ, ನಂತರ ಪಂಚನಾಮೆಯಲ್ಲಿ ಸಂಭಾಷಣೆಯನ್ನು ಲಿಪಿಕರಣಗೊಳಿಸಿರುತ್ತಾರೆ. ನಂತರ ತನಿಖಾಧಿಕಾರಿಯವರು ದೂರುದಾರರಿಗೆ ಎದುರುದಾರರ ಹತ್ತಿರ ಹೋಗಿ ಕೆಲಸದ ಬಗ್ಗೆ ವಿಚಾರಿಸಿ, ಆಗ ಎದುರುದಾರರು ಲಂಚದ ಹಣ ಕೇಳಿದಾಗ ಮಾತ್ರ, ಪುಡಿಲೇಪಿತ ನೋಟುಗಳನ್ನು ನೀಡಬೇಕೆಂದು, ಒಂದುವೇಳೆ ಎದುರುದಾರರ ಬೇರೆಯವರ ಕೈಗೆ ಹಣ ಕೊಡುವಂತೆ ಹೇಳಿದಾಗ ಅಥವಾ ಬೇರೆ ಯಾವುದೇ ಸ್ಥಳದಲ್ಲಿ ಇಟ್ಟುಹೋಗಲು ತಿಳಿಸಿದರೆ, ಎದುರುದಾರರು ಹೇಳಿದಂತೆ ಲಂಚದ ಹಣವನ್ನು ಕೊಟ್ಟು ಅಲ್ಲಿಂದ ಹೊರಬಂದು ಎರಡೂ ಕೈಗಳಿಂದ ತಲೆಯನ್ನು ಸವರಿಕೊಳ್ಳುವ ಮೂಲಕ ಸನ್ನೆ ಮಾಡಬೇಕೆಂದು ಮತ್ತು ಎದುರುದಾರರ ಬಳಿ ಹೋಗುವಾಗ ನೀಡಿದ ಧ್ವನಿಮುದ್ರಕದಲ್ಲಿ ಸಂಭಾಷಣೆಯನ್ನು ಧ್ವನಿಮುದ್ರಿಸಿಕೊಳ್ಳುವಂತೆ ಸೂಚನೆ ನೀಡಿರುತ್ತಾರೆ. ನೆರಳುಸಾಕ್ಷಿಗೆ ದೂರುದಾರರೊಂದಿಗೆ ಹೋಗಿ ಅಲ್ಲಿ ನಡೆಯುವ ವಿದ್ಯಮಾನಗಳನ್ನು ಗಮನಿಸುವಂತೆ ತಿಳಿಸಿ ಎಲ್ಲರ ಸಮಕ್ಷಮ ಜಪ್ತಿ ಪಂಚನಾಮೆಯನ್ನು ನಿರ್ವಹಿಸಿರುತ್ತಾರೆ.

ದಿ: 14/06/2018 ರಂದು ತನಿಖಾಧಿಕಾರಿಯವರು, ದೂರುದಾರರು, ಪಂಚಸಾಕ್ಷಿದಾರರು ಹಾಗೂ ಸಿಬ್ಬಂದಿಗಳೊಂದಿಗೆ ಟ್ರ್ಯಾಪ್ ತಂಡವು ಸಜ್ಜಾದ ನಂತರ, ತನಿಖಾಧಿಕಾರಿಯ ಸೂಚನೆಯಂತೆ ದೂರುದಾರರು 2ನೇ ಎದುರುದಾರರಿಗೆ ಕರೆ ಮಾಡಿದಾಗ, 2ನೇ ಎದುರುದಾರರು ಬಳ್ಳಾರಿ ತಾಲ್ಲೂಕು ಕಚೇರಿಯಲ್ಲಿರುವುದಾಗಿ ಅಲ್ಲಿಗೆ ಬರಲು ತಿಳಿಸುತ್ತಾರೆ. ನಂತರ ತನಿಖಾತಂಡದವರೆಲ್ಲರೂ ಬಳ್ಳಾರಿಯ ಎಸ್.ಬಿ.ಐ. ಬ್ಯಾಂಕ್ ಹತ್ತಿರ ವಾಹನಗಳನ್ನು ನಿಲ್ಲಿಸಿ, ತನಿಖಾಧಿಕಾರಿಯವರು ದೂರುದಾರರಿಗೆ ಮತ್ತು ನೆರಳುಸಾಕ್ಷಿಗೆ ಮತ್ತೊಮ್ಮೆ ಸೂಚನೆಗಳನ್ನು ನೆನಪಿಸಿ ಕಳುಹಿಸಿಕೊಟ್ಟಿರುತ್ತಾರೆ. ದೂರುದಾರರು ನೆರಳುಸಾಕ್ಷಿಯೊಂದಿಗೆ 2ನೇ ಎದುರುದಾರರ ಬಳಿ ಹೋದಾಗ ಅವರು ಡಿ.ಸಿ. ಆಫೀಸ್‌ನಲ್ಲಿ ಮೀಟಿಂಗ್ ಇದೆ ಅಲ್ಲಿಗೆ ಬನ್ನಿ ಎಂದು ಹೇಳಿರುತ್ತಾರೆ. ಅದರಂತೆ ತನಿಖಾತಂಡದವರೆಲ್ಲರೂ ಡಿ.ಸಿ. ಆಫೀಸ್ ಆವರಣಕ್ಕೆ ಬಂದಿರುತ್ತಾರೆ. ಅಲ್ಲಿ ದೂರುದಾರರಿಗೆ 2ನೇ ಎದುರುದಾರರು ಫೋನ್ ಮಾಡಿ ಡಿ.ಸಿ. ಆಫೀಸಿನ ಹಿಂದುಗಡೆ ಇರುವ ವಾರ್ತಾ ಮತ್ತು ಸಾರ್ವಜನಿಕ

ಸಂಪರ್ಕ ಇಲಾಖೆಯ ಕಚೇರಿಯ ಎದುರುಗಡೆ ಇರುವುದಾಗಿ ಅಲ್ಲಿಗೆ ಬರುವಂತೆ ತಿಳಿಸಿರುತ್ತಾರೆ. ಆಗ ದೂರುದಾರರು ನೆರಳುಸಾಕ್ಷಿಯೊಂದಿಗೆ 2ನೇ ಎದುರುದಾರರ ಬಳಿಹೋಗಿ ಕೆಲಸದ ಬಗ್ಗೆ ಮಾತನಾಡಿದಾಗ, 2ನೇ ಎದುರುದಾರರು ಬೇಡಿಕೆಯಿಟ್ಟ ಹಣ ಕೇಳಿದಾಗ ದೂರುದಾರರು 20,000/- ರೂ. ಲಂಚದ ಹಣವನ್ನು ನೀಡಿದ್ದು, ಅದನ್ನು 2ನೇ ಎದುರುದಾರರು ಬಲಗೈನಿಂದ ಪಡೆದು, ಎರಡೂ ಕೈಗಳಲ್ಲಿ ಎಣಿಸಿ, ಪ್ಯಾಂಟಿನ ಬಲಗಡೆಯ ಸೈಡ್‌ಜೇಬಿನಲ್ಲಿ ಇಟ್ಟುಕೊಂಡಿರುತ್ತಾರೆ. ಆಗ ದೂರುದಾರರು 2ನೇ ಎದುರುದಾರರಿಗೆ ಹಣ ನೀಡುವ ವಿಷಯವನ್ನು 1ನೇ ಎದುರುದಾರರಿಗೆ ತಿಳಿಸುವಂತೆ ಹೇಳಿದಾಗ 2ನೇ ಎದುರುದಾರರು ಫೋನ್ ಮಾಡಿದ್ದು, ಸದರಿ ಕರೆಯನ್ನು ಅವರು ಸ್ವೀಕರಿಸದೆ, ತರುವಾಯ 1ನೇ ಎದುರುದಾರರೇ 2ನೇ ಎದುರುದಾರರಿಗೆ ಫೋನ್ ಮಾಡಿದಾಗ 2ನೇ ಎದುರುದಾರರು ದೂರುದಾರರ ಹಣ ಮುಟ್ಟಿರುವುದಾಗಿ ತಿಳಿಸಿದ ನಂತರ, 1ನೇ ಎದುರುದಾರರು ನಾಳೆ ಕಚೇರಿಗೆ ಬಂದು ಸಹಿಮಾಡು ಅಂತ ಹೇಳುವಂತೆ ತಿಳಿಸಿರುತ್ತಾರೆ. ನಂತರ ದೂರುದಾರರು ಅವರ ಎರಡೂ ಕೈಗಳಿಂದ ತಲೆಯನ್ನು ಸವರಿಕೊಳ್ಳುವ ಮೂಲಕ ಸನ್ನೆ ಮಾಡಿದ್ದು, ಆಗ ತನಿಖಾಧಿಕಾರಿಯವರ ತಂಡದವರು ದೂರುದಾರರ ಬಳಿ ಧಾವಿಸಿದಾಗ ದೂರುದಾರರು 2ನೇ ಎದುರುದಾರರನ್ನು ತೋರಿಸಿ, 1ನೇ ಎದುರುದಾರರಿಗೆ ಲಂಚದ ಹಣವನ್ನು ಕೊಡಬೇಕೆಂದು ಹೇಳಿ 20,000/- ರೂ. ಲಂಚದ ಹಣ ಪಡೆದುಕೊಂಡ ವ್ಯಕ್ತಿ ಇವರೇ ಎಂದು ತೋರಿಸಿದ ಮೇರೆಗೆ ತನಿಖಾಧಿಕಾರಿಯು ಸಂಜೆ ಸುಮಾರು 7.45 ಕ್ಕೆ 2ನೇ ಎದುರುದಾರರನ್ನು ವಶಕ್ಕೆ ಪಡೆದಿರುತ್ತಾರೆ. ನಂತರ ತನಿಖಾಧಿಕಾರಿಯವರು ಗುರುತಿನ ಚೀಟಿಯನ್ನು ತೋರಿಸಿ ತನಿಖೆಗೆ ಸಹಕರಿಸುವಂತೆ ತಿಳಿಸಿರುತ್ತಾರೆ.

ತನಿಖಾಧಿಕಾರಿಯವರ ಸೂಚನೆಯಂತೆ ವಾರ್ತ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆಯ ಕಚೇರಿಯ ಪಕ್ಕದಲ್ಲಿರುವ ಬೀದಿ ಬೆಳಕಿನಲ್ಲಿ ಸಿಬ್ಬಂದಿಯವರು ಸೋಡಿಯಂ ಕಾರ್ಬೋನೇಟ್ ದ್ರಾವಣವನ್ನು ತಯಾರಿಸಿ, ಆ ದ್ರಾವಣವನ್ನು ಎರಡೂ ಬಟ್ಟಲುಗಳಲ್ಲಿ ಪಡೆದುಕೊಂಡು, ಒಂದು ಬಟ್ಟಲಿನಲ್ಲಿದ್ದ ದ್ರಾವಣದಲ್ಲಿ 2ನೇ ಎದುರುದಾರರ ಬಲಗೈ ಬೆರಳುಗಳನ್ನು ಅದ್ದಿಸಿ ತೊಳೆದಾಗ, ಆ ದ್ರಾವಣವು ತಿಳಿ ಗುಲಾಬಿ ಬಣ್ಣಕ್ಕೆ ತಿರುಗಿರುತ್ತದೆ. ಇನ್ನೊಂದು ಬಟ್ಟಲಿನಲ್ಲಿದ್ದ ದ್ರಾವಣದಲ್ಲಿ 2ನೇ ಎದುರುದಾರರ ಎಡಗೈ ಬೆರಳುಗಳನ್ನು ಅದ್ದಿಸಿ ತೊಳೆದಾಗ, ಆ ದ್ರಾವಣವು ತಿಳಿ ಗುಲಾಬಿ ಬಣ್ಣಕ್ಕೆ ತಿರುಗಿರುತ್ತದೆ. ಆ ದ್ರಾವಣಗಳನ್ನು ತನಿಖಾಧಿಕಾರಿಯು ವಶಪಡಿಸಿಕೊಂಡಿರುತ್ತಾರೆ.

ತನಿಖಾಧಿಕಾರಿಯು 2ನೇ ಎದುರುದಾರರಿಗೆ ದೂರುದಾರರಿಂದ ಪಡೆದ ಹಣದ ಬಗ್ಗೆ ವಿಚಾರಿಸಿದಾಗ, 2ನೇ ಎದುರುದಾರರು ಅವರ ಪ್ಯಾಂಟಿನ ಬಲಗಡೆಯ ಸೈಡ್‌ಜೇಬಿನಿಂದ ಹಣ ತೆಗೆದು ಪಂಚಸಾಕ್ಷಿ-1ರವರಿಗೆ ಕೊಟ್ಟಿದ್ದು, ಪಂಚಸಾಕ್ಷಿ-2ರವರು ಪ್ರಾಯೋಗಿಕಾ ಪಂಚನಾಮೆಯ ಸಮಯದಲ್ಲಿ ನಮೂದಿಸಿದ ನೋಟುಗಳ ವಿವರಗಳಿಗೆ ಪರಿಶೀಲಿಸಿ

ನೋಡಲು ತನಿಖಾಧಿಕಾರಿಯವರು ಸೂಚಿಸಿದ ಮೇರೆಗೆ, ಪಂಚಸಾಕ್ಷಿದಾರರು ಆ ನೋಟುಗಳ ವಿವರಗಳನ್ನು ಪರಿಶೀಲಿಸಿ ತಾಳೆಯಾಗಿರುವುದಾಗಿ ತಿಳಿಸಿರುತ್ತಾರೆ. ನಂತರ ತನಿಖಾಧಿಕಾರಿಯು ಆ ಹಣವನ್ನು ವಶಕ್ಕೆ ಪಡೆದಿರುತ್ತಾರೆ. 2ನೇ ಎದುರುದಾರರ ಬಳಿ ದೂರುದಾರರು ನೀಡಿದ ನೋಟುಗಳಲ್ಲದೆ, ಇನ್ನೂ ಹೆಚ್ಚಿನ ಹಣವಿದ್ದು, ಆ ನೋಟುಗಳ ವಿವರಗಳನ್ನು ಪಂಚನಾಮೆಯಲ್ಲಿ ನಮೂದಿಸಿ, ಆ ಹಣವನ್ನು ತನಿಖಾಧಿಕಾರಿಯು ವಶಕ್ಕೆ ಪಡೆದಿರುತ್ತಾರೆ.

ತನಿಖಾಧಿಕಾರಿಯವರು ದೂರುದಾರರಿಗೆ ನೀಡಿದ ಧ್ವನಿಮುದ್ರಕವನ್ನು ಹಾಜರುಪಡಿಸುವಂತೆ ತಿಳಿಸಿದಾಗ, ದೂರುದಾರರು 2ನೇ ಎದುರುದಾರರನ್ನು ಬಳ್ಳಾರಿ ತಾಲ್ಲೂಕು ಕಚೇರಿಯಲ್ಲಿ ಭೇಟಿ ಮಾಡುವ ಸಂದರ್ಭದಲ್ಲಿ ಆನ್ ಮಾಡಿರಲಿಲ್ಲ, ಡಿ.ಸಿ. ಕಚೇರಿ ಹಿಂಭಾಗದ ಆವರಣದಲ್ಲಿ 2ನೇ ಎದುರುದಾರರನ್ನು ಭೇಟಿಮಾಡಿ, ಹಣ ನೀಡಿದ ನಂತರ, 2ನೇ ಎದುರುದಾರರು 1ನೇ ಎದುರುದಾರರ ಜೊತೆ ಮಾಡನಾಡುವಾಗ ಸ್ಪೀಕರ್ ಆನ್ ಮಾಡಿ ಮಾತನಾಡಿದ್ದನ್ನು ಧ್ವನಿಮುದ್ರಿಸಿಕೊಂಡಿರುವುದಾಗಿ ತಿಳಿಸಿ ಹಾಜರುಪಡಿಸಿರುತ್ತಾರೆ. ಧ್ವನಿಮುದ್ರಕದಲ್ಲಿದ್ದ ಸಂಭಾಷಣೆಯನ್ನು ಎಲ್ಲರಿಗೂ ಕೇಳಿಸಿ ಪಂಚನಾಮೆಯಲ್ಲಿ ಲಿಪಿಕರಣಗೊಳಿಸಿ, ನಂತರ ಧ್ವನಿಮುದ್ರಕದಲ್ಲಿದ್ದ ಸಂಭಾಷಣೆಯನ್ನು ಎರಡು ಸಿ.ಡಿ.ಗಳಿಗೆ ವರ್ಗಾಯಿಸಿ, ಸಿ.ಡಿ.ಗಳನ್ನು ವಶಕ್ಕೆ ಪಡೆದಿರುತ್ತಾರೆ. ಧ್ವನಿಮುದ್ರಕದಲ್ಲಿದ್ದ ಸಂಭಾಷಣೆಯನ್ನು ಮತ್ತು ದಿ: 14/06/2018 ರಂದು ಪಂಚನಾಮೆಯಲ್ಲಿ ಲಿಪಿಕರಣಗೊಳಿಸಿದ ಸಂಭಾಷಣೆಯನ್ನು ಮತ್ತೊಮ್ಮೆ 1ನೇ ಎದುರುದಾರರ ಕಚೇರಿಯಲ್ಲಿ ಕೆಲಸಮಾಡುವ ಸಿ. ಬಸವರಾಜು ಮತ್ತು ಜಿ. ಗಾಯಿತ್ರಿಯವರಿಗೆ ಕೇಳಿಸಿದಾಗ ಅವರು 1 ಮತ್ತು 2ನೇ ಎದುರುದಾರರ ಧ್ವನಿಯನ್ನು ಗುರುತಿಸಿರುತ್ತಾರೆ. ತನಿಖಾಧಿಕಾರಿಯು 2ನೇ ಎದುರುದಾರರಿಗೆ ಮೊಬೈಲ್‌ನ್ನು ಹಾಜರುಪಡಿಸುವಂತೆ ತಿಳಿಸಿದಾಗ ಅವರು ಹಾಜರುಪಡಿಸಿದ್ದು, ಅದರಲ್ಲಿ ಎರಡು ಸಿಮ್‌ಗಳಿದ್ದು, 2ನೇ ಎದುರುದಾರರು 1ನೇ ಎದುರುದಾರರ ಜೊತೆ ಮಾತನಾಡಿರುವ ಸಂಗತಿ ಕಂಡು ಬಂದಿದ್ದರಿಂದ ಮೊಬೈಲ್‌ನ್ನು ತನಿಖಾಧಿಕಾರಿಯವರು ವಶಕ್ಕೆ ಪಡೆದಿರುತ್ತಾರೆ.

ತನಿಖಾಧಿಕಾರಿಯವರು 2ನೇ ಎದುರುದಾರರಿಗೆ ಸಮಜಾಯಿಷಿ ಬರೆದುಕೊಡುವಂತೆ ತಿಳಿಸಿದಾಗ, 2ನೇ ಎದುರುದಾರರು ಅವರ ಸಮಜಾಯಿಷಿಯಲ್ಲಿ" ದಿ: 13/06/2018 ರಂದು ದೂರುದಾರರು ದೂರವಾಣಿ ಮೂಲಕ ಸಂಪರ್ಕಿಸಿ, ಈ ಹಿಂದೆ ತಕರಾರು ನೀಡಿದ ಮ್ಯುಟೇಷನ್ ತಡೆಹಿಡಿದು, ಮಾನ್ಯ ತಹಶೀಲ್ದಾರ್ ಕುರುಗೋಡು ಕಚೇರಿಯಲ್ಲಿ ಕಡತ ಪೆಂಡಿಂಗ್ ಇರುತ್ತದೆ. ಹಕ್ಕು ಬದಲಾವಣೆ ಮಾಡಿಕೊಡಲು ಕೇಳಿರುತ್ತಾರೆ. 1ನೇ ಎದುರುದಾರರನ್ನು ಕೇಳಿದಾಗ ದೂರುದಾರರ ಕಡತ ಪೆಂಡಿಂಗ್ ಇರುತ್ತದೆ, ಏನಾದರೂ ಹೇಳಿ ಮಾತನಾಡಿಕೊಂಡು ಬಾ ಎಂದು ಹೇಳಿರುತ್ತಾರೆ. ನಂತರ ದೂರುದಾರರನ್ನು ಸಂಪರ್ಕಿಸಿದಾಗ ಎಷ್ಟಾದರೂ ಹಣವನ್ನು ನೀಡುತ್ತೇನೆ ಮಾಡಿಸಿಕೊಡಿ

ಎಂದು ತಿಳಿಸಿರುತ್ತಾರೆ. ಸದರಿ ವಿಷಯವನ್ನು 1ನೇ ಎದುರುದಾರರಿಗೆ ತಿಳಿಸುತ್ತೇನೆ. ದಿ: 14/06/2018 ರಂದು ದೂರುದಾರರು ಹಣವನ್ನು ತೆಗೆದುಕೊಂಡು ಕುರುಗೋಡಿಗೆ ಹೋಗುತ್ತಿರುವುದಾಗಿ ತಿಳಿಸಿದಾಗ, ಈಗ ಕಚೇರಿಯ ಸಮಯ ಮುಗಿದಿರುತ್ತದೆ ನಾಳೆ ಹೋಗಲು ತಿಳಿಸಿರುವುದಾಗಿ ಮತ್ತು ಈಗ ಬಳ್ಳಾರಿ ಡಿ.ಸಿ. ಕಚೇರಿಯಲ್ಲಿ ಮೀಟಿಂಗ್‌ಗೆ ಹೋಗುತ್ತೇನೆ ಎಂದು ತಿಳಿಸಿರುತ್ತೇನೆ. ನಂತರ ಅದೇ ದಿನ 7.20ರ ಸಮಯದಲ್ಲಿ ದೂರುದಾರರು ಕರೆಮಾಡಿ ಹಣವನ್ನು ನಿಮ್ಮ ಬಳಿ ಕೊಡುತ್ತೇನೆ ಡಿ.ಸಿ. ಆಫೀಸಿನಲ್ಲಿದ್ದೇನೆ ಎಂದು ಹೇಳಿರುತ್ತಾರೆ. ಕೊನೆಗೆ ನಾನು ಹಣ ಬೇಡ ಇದರಲ್ಲಿ ನನ್ನ ಕೆಲಸ ಏನೂ ಇಲ್ಲ ನಾಳೆ ಕುರುಗೋಡಿಗೆ ಹೋಗಿ ಎಂದು ಹೇಳಿದಾಗ ಅಲ್ಲಿ ಹಣವನ್ನು ಕೊಡಲು ಸಾಧ್ಯವಾಗುವುದಿಲ್ಲ ಸಾರ್ ನೀವೇಕೊಡಿ ಎಂದು 20,000/- ರೂ.ಗಳನ್ನು ನನ್ನ ಕೈಗೆ ನೀಡಿದ್ದು ನಿಜವಿರುತ್ತದೆ ಹಾಗೂ ಈ ಮುಂಚೆ 1ನೇ ಎದುರುದಾರರು 20 ರಿಂದ 25,000/- ರೂ. ತೆಗೆದುಕೊಳ್ಳಲು ಸೂಚಿಸಿರುತ್ತಾರೆಂದು" ಬರೆದುಕೊಟ್ಟಿರುತ್ತಾರೆ.

ದೂರುದಾರರು ಮತ್ತು ನೆರಳುಸಾಕ್ಷಿ ಸದರಿ ಸಮಜಾಯಿಷಿಯನ್ನು ಅಲ್ಲಗಳೆದಿರುತ್ತಾರೆ. ತನಿಖಾಧಿಕಾರಿಯು 2ನೇ ಎದುರುದಾರರ ಬಳಿ ಇರುವ ದಾಖಲೆಗಳನ್ನು ವಶಪಡಿಸಿಕೊಂಡಿದ್ದು, ಇನ್ನುಳಿದ ದಾಖಲೆಗಳು 1ನೇ ಎದುರುದಾರರ ಕಚೇರಿಯಲ್ಲಿರುವುದಾಗಿ ತಿಳಿಸಿದ ಮೇರೆಗೆ ಎಲ್ಲರ ಸಮಕ್ಷಮ ಸವಿಸ್ತಾರ ಜಪ್ತಿ ಪಂಚನಾಮೆಯನ್ನು ಪೂರೈಸಿದ ನಂತರ 2ನೇ ಎದುರುದಾರರನ್ನು ದಸ್ತಗಿರಿ ಮಾಡಿರುತ್ತಾರೆ. 1ನೇ ಎದುರುದಾರರನ್ನು ದಿ: 15/06/2018 ರಂದು ಬೆಳಿಗ್ಗೆ 9.00 ಗಂಟೆಗೆ ಅವರ ಮನೆಯಲ್ಲಿ ತನಿಖಾಧಿಕಾರಿಯವರು ದಸ್ತಗಿರಿ ಮಾಡಿರುತ್ತಾರೆ.

ದಿ: 15/06/2018 ರಂದು ತನಿಖಾಧಿಕಾರಿಯವರು ಬಳ್ಳಾರಿ ನಗರದ ಅಮೆರಿಕನ್ ಗೆಸ್ಟ್‌ಹೌಸ್ ನಲ್ಲಿ ಪಂಚರನ್ನು ಕರೆಸಿ, 1 ಮತ್ತು 2ನೇ ಎದುರುದಾರರ ಮಾದರಿ ಧ್ವನಿಯನ್ನು ಪಡೆದುಕೊಂಡಿರುತ್ತಾರೆ. 2ನೇ ಎದುರುದಾರರ ಸಂಭಾಷಣೆಯ ಮಾದರಿಧ್ವನಿಯ ಫೈಲ್-1, ಮಾದರಿಧ್ವನಿಯ ಫೈಲ್-2 ಮತ್ತು ಮಾದರಿಧ್ವನಿಯ ಫೈಲ್-3 ಎಂದು ಸಂಗ್ರಹಿಸಿ, ಆ ಮೂರು ಫೈಲ್‌ಗಳನ್ನು ಲ್ಯಾಪ್‌ಟಾಪ್ ಮುಖಾಂತರ ಡಿ.ವಿ.ಡಿ.ಗಳಿಗೆ ವರ್ಗಾಯಿಸಿ, ಡಿ.ವಿ.ಡಿ.ಗಳನ್ನು ವಶಕ್ಕೆ ಪಡೆದು, ಆ ಬಗ್ಗೆ ಪಂಚನಾಮೆಯನ್ನು ನಿರ್ವಹಿಸಿರುತ್ತಾರೆ.

ಅದೇ ದಿನ, ಅದೇ ಸಮಯದಲ್ಲಿ 1ನೇ ಎದುರುದಾರರ ಸಂಭಾಷಣೆಯ ಮಾದರಿಧ್ವನಿಯ ಫೈಲ್-1 ಮತ್ತು ಮಾದರಿಧ್ವನಿಯ ಫೈಲ್ -2ನ್ನು ಸಂಗ್ರಹಿಸಿ, ಆ ಎರಡು ಫೈಲ್‌ಗಳನ್ನು ಲ್ಯಾಪ್‌ಟಾಪ್ ಮುಖಾಂತರ ಡಿ.ವಿ.ಡಿ.ಗಳಿಗೆ ವರ್ಗಾಯಿಸಿ, ಡಿ.ವಿ.ಡಿ.ಗಳನ್ನು ವಶಕ್ಕೆ ಪಡೆದು, ಆ ಬಗ್ಗೆ ಪಂಚನಾಮೆಯನ್ನು ನಿರ್ವಹಿಸಿರುತ್ತಾರೆ.

ದಿ: 15/06/2018 ರಂದು ದೂರುದಾರರಿಗೆ ಸಂಬಂಧಿಸಿದ ದಾಖಲೆಗಳನ್ನು ಉಪ-ತಹಶೀಲ್ದಾರ್ ಕುರುಗೋಡು ರವರಿಂದ ವಶಕ್ಕೆ ಪಡೆದಿರುತ್ತಾರೆ.

ತನಿಖಾಧಿಕಾರಿಯವರು 1ನೇ ಎದುರುದಾರರಿಗೆ ಸಮಜಾಯಿಷಿ ಬರೆದುಕೊಡುವಂತೆ ತಿಳಿಸಿದಾಗ 1ನೇ ಎದುರುದಾರರು ಸಮಜಾಯಿಷಿಯನ್ನು ಬರೆದುಕೊಟ್ಟಿದ್ದು, ಸದರಿ ಸಮಜಾಯಿಷಿಯಲ್ಲಿ " 1ನೇ ಎದುರುದಾರರು ಬಳ್ಳಾರಿ ಜಿಲ್ಲೆ ಕುರುಗೋಡು ತಾಲ್ಲೂಕು ತಹಶೀಲ್ದಾರರಾಗಿ ಕರ್ತವ್ಯ ನಿರ್ವಹಿಸುತ್ತಿದ್ದು, ದಿ; 19/03/2018 ರಂದು ಚುನಾವಣೆ ಕೆಲಸದ ನಿಮಿತ್ತ, ಚುನಾವಣೆ ಕೆಲಸಕ್ಕೆ ಹಾಜರಾಗಿದ್ದು ಇರುತ್ತದೆ. ಚುನಾವಣೆ ಮುಗಿದ ನಂತರದಲ್ಲಿ ಕಚೇರಿಯ ಕೆಲಸದಲ್ಲಿ ತೊಡಗಿಕೊಂಡು ಬಾಕಿ ಇದ್ದ ಪ್ರಕರಣಗಳನ್ನು ಇತ್ಯರ್ಥಗೊಳಿಸಲು ನಿರ್ಧರಿಸಿ ಕೆಲವು ಮ್ಯುಟೇಷನ್ ತಕರಾರು ಪ್ರಕರಣಗಳನ್ನು ವಿಲೇವಾರಿ ಮಾಡಲು ಸಂಬಂಧಿಸಿದ ಹಕ್ಕುದಾರರಗೆ ನೋಟಿಸ್ ಜಾರಿ ಮಾಡುವಂತೆ ಕುಡತಿನಿ ಗ್ರಾಮದ ಕೆಲವು ಪ್ರಕರಣಗಳಲ್ಲಿ ನೋಟಿಸ್ ಜಾರಿ ಮಾಡಲು ಗ್ರಾಮಲೆಕ್ಕಿಗರಿಗೆ ತಿಳಿಸಿದ್ದು ಇರುತ್ತದೆ. ಆದರೆ, ಗ್ರಾಮಲೆಕ್ಕಿಗರು ಸಂಬಂಧಿಸಿದ ಪಕ್ಷಗಾರರ ಹತ್ತಿರ ಮಾತನಾಡಿರುವ ವಿಷಯ ನನಗೆ ಗೊತ್ತಿರುವುದಿಲ್ಲ ಮತ್ತು ಸದರಿಯವರ ಹತ್ತಿರ ನಾನು ಹಣದ ವಿಷಯದ ಬಗ್ಗೆ ಸಹ ಮಾತನಾಡಿರುವುದಿಲ್ಲ. ದಿ: 14/06/2018 ರ ಸಂಜೆ 7.30 ಗಂಟೆ ಸುಮಾರಿಗೆ ಗ್ರಾಮಲೆಕ್ಕಿಗರು ಕರೆಮಾಡಿ ಸಂಬಂಧಿಸಿದ ಪಕ್ಷಗಾರರು ನಾಳೆ ಸಹಿಮಾಡಲು ಬರುವಂತೆ ತಿಳಿಸಿದ್ದು, ಅದಕ್ಕೆ ನಾನು ಸರಿ ಬರಲಿ ಎನ್ನುವ ಅರ್ಥದಲ್ಲಿ ಮಾತನಾಡುತ್ತಿರುವಾಗ ಸದರಿ ಗ್ರಾಮಲೆಕ್ಕಿಗರು ಹಣದ ವಿಷಯವನ್ನು ಮಾತನಾಡಿದ್ದು, ನಾನು ಆ ಸಮಯದಲ್ಲಿ ತುರ್ತು ಕೆಲಸದಲ್ಲಿದ್ದುದರಿಂದ ಸರಿ ಆಯಿತು ಎಂದು ಹೇಳಿದ್ದೇನೆಯೇ ಹೊರತು, ಸದರಿಯವರ ಹತ್ತಿರ ಯಾವುದೇ ಪ್ರಕರಣಕ್ಕೂ ಪಕ್ಷಗಾರರ ಹತ್ತಿರ ಹಣ ಕೊಡಿಸುವ ಬಗ್ಗೆಯಾಗಲಿ, ಇತರೇ ಯಾವುದೇ ವಿಷಯದ ಬಗ್ಗೆ ಮಾತನಾಡಿರುವುದಿಲ್ಲ. ನಾನು ನಿರಪರಾಧಿಯಾಗಿರುತ್ತೇನೆ ಮತ್ತು ಪ್ರಕರಣದಿಂದ ಕೈಬಿಡಬೇಕೆಂದು ಬರೆದುಕೊಟ್ಟಿರುತ್ತಾರೆ. 1ನೇ ಎದುರುದಾರರು ಬರೆದುಕೊಟ್ಟ ಸಮಜಾಯಿಷಿಯು ಸಮರ್ಪಕವಾಗಿರುವುದಿಲ್ಲವೆಂದು ದೂರುದಾರರು ತಿಳಿಸಿರುತ್ತಾರೆ.

iii) ನಂತರ, ತನಿಖಾಧಿಕಾರಿಯವರು ಸಾಕ್ಷಿದಾರರ ಹೇಳಿಕೆ, ತನಿಖಾ ದಾಖಲೆಗಳನ್ನು, ರಾಸಾಯನಿಕ ತಜ್ಞರ ವರದಿಯನ್ನು ಮತ್ತು ಧ್ವನಿ ವಿಶ್ಲೇಷಣಾ ವರದಿಯನ್ನು ಪಡೆದು, ಎದುರುದಾರರ ವಿರುದ್ಧ ದೋಷರೋಪಣ ಪತ್ರವನ್ನು ನ್ಯಾಯಾಲಯಕ್ಕೆ ಸಲ್ಲಿಸಿರುತ್ತಾರೆ.

3) ಎದುರುದಾರರಿಂದ ಪರಿವೀಕ್ಷಣಾ ಟಿಪ್ಪಣಿಗೆ ಸಮಜಾಯಿಷಿ ಕೇಳಲಾಗಿತ್ತು. 1ನೇ ಎದುರುದಾರರು ದಿ: 06/08/2021 ರಂದು, 2ನೇ ಎದುರುದಾರರು ದಿ: 07/09/2021 ರಂದು ಈ ಕಚೇರಿಗೆ ಆಕ್ಷೇಪಣೆಯನ್ನು ಸಲ್ಲಿಸಿರುತ್ತಾರೆ. ಸದರಿ ಆಕ್ಷೇಪಣೆಯಲ್ಲಿ ಪರಿವೀಕ್ಷಣಾ ಟಿಪ್ಪಣೆಯ ಎಲ್ಲಾ ಅಂಶಗಳನ್ನು ಅಲ್ಲಗಳೆದಿರುತ್ತಾರೆ ಮತ್ತು ಅವರು ತನಿಖಾಧಿಕಾರಿಯವರಿಗೆ ನೀಡಿದ ಸಮಜಾಯಿಷಿಯನ್ನು (ಮೇಲೆ ತಿಳಿಸಿದಂತೆ) ಪುನರುಚ್ಚರಿಸಿರುತ್ತಾರೆ. ಆದರೆ ರಾಸಾಯನಿಕ ತಜ್ಞರ ಪರೀಕ್ಷಾ ವರದಿಯಂತೆ ತನಿಖಾಧಿಕಾರಿಯವರು 2ನೇ

ಎದುರುದಾರರಿಂದ ಸಂಗ್ರಹಿಸಿದ ಮುದ್ದೆಮಾಲುಗಳಲ್ಲಿ ಫಿನಾಪ್ತಲಿನ್ ಅಂಶ ಇರುವುದು ಕಂಡುಬಂದಿರುತ್ತದೆ ಹಾಗೂ 1 ಮತ್ತು 2ನೇ ಎದುರುದಾರರ ಧ್ವನಿಪರೀಕ್ಷಾ ವರದಿಯಲ್ಲಿ 1 ಮತ್ತು 2ನೇ ಎದುರುದಾರರ ಧ್ವನಿಯು ಮಾದರಿ ಧ್ವನಿಯೊಂದಿಗೆ ತಾಳೆಯಾಗಿರುವುದಾಗಿ ಕಂಡುಬಂದಿರುತ್ತದೆ. ಎದುರುದಾರರುಗಳು ನೀಡಿರುವ ಕಾರಣಗಳು ಈ ಪ್ರಕರಣದಿಂದ ಕೈಬಿಡುವ ಬಗ್ಗೆ ಸಮಂಜಸವಾಗಿರುವುದಿಲ್ಲ ಮತ್ತು ಅವರುಗಳು ಸಲ್ಲಿಸಿದ ಆಕ್ಷೇಪಣೆಯ ಅಂಶಗಳ ಮೇರೆಗೆ ಪ್ರಕರಣವನ್ನು ಮುಕ್ತಾಯಗೊಳಿಸಲು ಸೂಕ್ತ ಕಾರಣಗಳಾಗಿ ಕಂಡುಬರುವುದಿಲ್ಲ.

4) ದೂರು ಅರ್ಜಿ ಸಾಕ್ಷಿದಾರರ ಹೇಳಿಕೆಗಳು, ತನಿಖಾಧಿಕಾರಿ ಸಂಗ್ರಹಿಸಿದ ದಾಖಲೆಗಳು, ರಾಸಾಯನಿಕ ತಜ್ಞರ ಪರೀಕ್ಷಾವರದಿ ಹಾಗೂ ದೋಷಾರೋಪಣ ಪತ್ರದಲ್ಲಿರುವ ಮಾಹಿತಿಗಳಿಂದ ಎದುರುದಾರರು ನೀಡಿರುವ ಉತ್ತರಗಳನ್ನು ಕೂಲಂಕುಷವಾಗಿ ಪರಿಶೀಲಿಸಲಾಗಿ, ಎದುರುದಾರರ ವಿರುದ್ಧ ನಡೆವಳಿಯನ್ನು ಕೈಬಿಡಲು ಸೂಕ್ತ / ಸಮಂಜಸ / ಸಮಾಧಾನಕರ ಕಾರಣ ತೋರಿಸಿಲ್ಲವೆಂದು ಅಭಿಪ್ರಾಯಕ್ಕೆ ಬರಲಾಗಿದೆ.

5) ಆದ್ದರಿಂದ ಈ ಪ್ರಕರಣದಲ್ಲಿನ ಎದುರುದಾರರು ಕರ್ನಾಟಕ ಲೋಕಾಯುಕ್ತ ಕಾಯಿದೆ 1984ರ ಕಲಂ 2 (12) ರ ಪ್ರಕಾರ ಸರ್ಕಾರಿ / ಸಾರ್ವಜನಿಕ ನೌಕರರಾಗಿದ್ದು, ನೌಕರರಿಗೆ ತರವಲ್ಲದ ರೀತಿಯಲ್ಲಿ ನಡೆದುಕೊಂಡು ಕರ್ತವ್ಯದಲ್ಲಿ ನಿಷ್ಠೆ ತೋರಿಸದೆ ಭ್ರಷ್ಟಾಚಾರವೆಸಗಿ ಕ.ನಾ.ಸೇ. (ನಡತೆ) ನಿಯಮಗಳು 1966 ನಿಯಮ 3 (1)(i) ರಿಂದ (iii) (ಪ್ರಸ್ತುತ ಕ.ನಾ.ಸೇ. (ನಡತೆ) ನಿಯಮಗಳು 2021 ನಿಯಮ (i) ರಿಂದ (iv)) ರನ್ವಯ ದುರ್ನಡತೆಯನ್ನು ಎಸಗಿರುವುದು ಮೇಲ್ನೋಟಕ್ಕೆ ಕಂಡುಬಂದಿದ್ದರಿಂದ ಎದುರುದಾರರ ವಿರುದ್ಧ ಇಲಾಖಾ ವಿಚಾರಣೆ ಮಾಡಲು ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಾವಳಿ 1957 ನಿಯಮ 14 (ಎ) ರಡಿ ವಿಚಾರಣೆ ನಡೆಸಲು ಈ ಪ್ರಾಧಿಕಾರಕ್ಕೆ ಒಪ್ಪಿಸುವಂತೆ ಹಾಗೂ 1ನೇ ಎದುರುದಾರರು ದಿನಾಂಕ 31/07/2019 ರಂದು ಈಗಾಗಲೇ ನಿವೃತ್ತಿ ಹೊಂದಿರುವುದರಿಂದ ಕೆ.ಸಿ.ಎಸ್. ಆರ್. ನಿಯಮ 214 (2)(ಬಿ)(1) ರ ಅಡಿ ಇಲಾಖಾ ವಿಚಾರಣೆಗೆ ಅನುಮತಿಯನ್ನು ನೀಡಬೇಕೆಂದು ಕೋರಿ ಕರ್ನಾಟಕ ಲೋಕಾಯುಕ್ತ ಕಾಯಿದೆ ಕಲಂ 12 (3) ರಡಿ ಪ್ರದತ್ತವಾದ ಅಧಿಕಾರದಡಿ ಈ ವರದಿ ಮೂಲಕ ಸಕ್ಷಮ ಪ್ರಾಧಿಕಾರಕ್ಕೆ ಶಿಫಾರಸ್ಸು ಮಾಡಲಾಗಿದೆ.

6) ಮುಂದುವರೆದು, ಕರ್ನಾಟಕ ಲೋಕಾಯುಕ್ತ ಕಾಯಿದೆ 1984 ಕಲಂ 12(4) ರ ಪ್ರಕಾರ ಸಕ್ಷಮ ಪ್ರಾಧಿಕಾರವು ಈ ವರದಿಯ ಮೇಲೆ ಏನು ಕ್ರಮ ಕೈಗೊಂಡಿದೆ ಅಥವಾ

ಏನು ಕ್ರಮ ಕೈಗೊಳ್ಳಲಾಗುತ್ತದೆ ಎಂಬುದರ ಬಗ್ಗೆ, ಈ ವರದಿಯನ್ನು ಸ್ವೀಕರಿಸಿದ **ಮೂರು ತಿಂಗಳೊಳಗೆ** ಈ ಪ್ರಾಧಿಕಾರಕ್ಕೆ ತಿಳಿಸಲು ಹೇಳಿದೆ.

ಸಂಬಂಧಪಟ್ಟ ದಾಖಲೆಗಳನ್ನು ಲಗತ್ತಿಸಿದೆ.

16/12/21

(ನ್ಯಾಯಮೂರ್ತಿ ಬಿ.ಎಸ್. ಪಾಟೀಲ್)
ಉಪಲೋಕಾಯುಕ್ತರು,
ಕರ್ನಾಟಕ ರಾಜ್ಯ, ಬೆಂಗಳೂರು.